Reg. No. | | | | | | | | | | | |

# BCMKALN 302

## III Semester B.Com. Examination, December 2023/January 2024
## (NEP – 2020) (2023 – 24 Batch Onwards)
## KANNADA
## ಕನ್ನಡ ಭಾಷಾ ಪತ್ರಿಕೆ – III (AECC)

ಸಮಯ : 2 ಗಂಟೆಗಳು ಗರಿಷ್ಠಾಂಕಗಳು : 60

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **(2×8=16)**

1) ಉತ್ತರಕುಮಾರನು ಜಂಭ ಕೊಚ್ಚಿಕೊಳ್ಳುವ ಬಗೆಯನ್ನು ವಿಶ್ಲೇಷಿಸಿರಿ.
2) 'ನಮ್ಮ ಕಾಣ್ಕೆ' ಕವಿತೆಯ ಕಾಳಜಿಗಳೇನು ? ವಿವರಿಸಿ.
3) 'ಇಷ್ಟಪಟ್ಟ ಕೆಲಸದವಳು' ಲೇಖನದಲ್ಲಿ ಕೆಲಸದವಳ ನಿಷ್ಠೆ ಎಂತಹುದು ಎಂಬುದನ್ನು ವಿವರಿಸಿ.
4) ಚಾಮುಂಡಿ ಐಸಾಸುರನನ್ನು ಸಂಹರಿಸಿದ ಬಗೆ ಹೇಗೆ ? ತಿಳಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×6=12)**

1) 'ಕಸ್ತೂರಿ ನಿವಾಸ' ಸಿನಿಮಾದ ಕಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
2) ಪಲಮಾವು ಪ್ರಾಕೃತಿಕವಾಗಿ ತತ್ತರಿಸಿ ಹೋಗಿರುವುದಕ್ಕೆ ಕಾರಣಗಳೇನು ? ವಿವರಿಸಿ.
3) ಪುರಂದರದಾಸರ ಬದುಕು ಮತ್ತು ಭಕ್ತಿಯನ್ನು ನಿಸಾರರು ಹೇಗೆ ಚಿತ್ರಿಸಿದ್ದಾರೆ ?
4) ಡಾ. ರಾಜ್‌ಕುಮಾರ್ ಅವರ ವ್ಯಕ್ತಿತ್ವದ ಮಾನವೀಯ ಮುಖವನ್ನು ಪರಿಚಯಿಸಿ.

III. **ಒಂದು** ಪದ್ಯದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ವಿವರಿಸಿರಿ. **(1×4=4)**

1) ನತ್ತು ಕೊಟ್ಟಳು ಹರಿಗೆ, ಅತ್ತುಬಿಟ್ಟಳು ಮರೆಗೆ
ಪತಿಯನಿತ್ತಳು ಕೊಡುಗೆ ದೇವನಡಿಗೆ
ಹೆಣ್ಣು ಮಾಯೆಯ ನೆರಳೆ ? ಹೆಣ್ಣು ಗಂಡಿನ ಮರುಳೆ ?
ಹೇಳಲೆದೆ ಉಂಟೇನು ಹಾಗಿವಳಿಗೆ.

Shri Dharmasthala Manjunatheshwara
College of Business Management Library
MANGALORE - 575 003

2) ದೆಸೆಗಳಿಗೆ ನಮಿಸಿ ದೈವಕ್ಕೆಱಗಿ ರವಿಗೆ ವಂ
ದಿಸಿ ಕೋಟಿ ಭವಭವದೊಳೆನಗೀ ಹರಿಶ್ಚಂದ್ರ
ವಸುಧೇಶನೇ ಗಂಡನಾಗಲಿ ದಿಟಂ ಲೋಹಿತಾಶ್ವೇ ಮಗನಾಗಲಿ
ವಸು ಸತ್ಯಕೀರ್ತಿಯೇ ಮಂತ್ರಿಯಾಗಲಿ ತರುಣ
ಶಶಿಮೌಳಿಯೇ ದೈವವಾಗಲೆಮ್ಮೆಳೆಯ ಪಾ
ಲಿಸುವ ವಿಶ್ವಾಮಿತ್ರ ನಿತ್ಯನಾಗಲಿಯೆನುತ ಬೇಡಿಕೊಂಡಿಂತೆಂದಳು.

ಪು.ತಿ.ನೋ.

IV. ಯಾವುದಾದರೂ **ಮೂರು** ವಾಕ್ಯಗಳ ಸಂದರ್ಭ ಸೂಚಿಸಿ, ವಿಶೇಷತೆಯನ್ನು ತಿಳಿಸಿರಿ. (3×4=12)

1) ತರುಣ ಶಶಿಮೌಳಿಯೇ ದೈವವಾಗಲಿ.

2) ಹೆಣ್ಣು ಜನ್ಮವು ಎಂಬ ಅರಿವೆ ನಿನಗಿಲ್ಲವಾಯ್ತೆ ?

3) ಮೇಲಿನ ರಂಗು ಮರೆಯಾಗಿ ಒಳ ಬಣ್ಣ ಒಡೆಯಬೇಕು.

4) ಆರೊಡನೆ ಕಾದುವೆನು ಕೆಲಬರು ಹಾರವರು.

5) ಕ್ವಾಣನಿಗೆ ಮರಣ ಬಂದು ಬುಡ್ತು.

V. **ಎರಡು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : (2×4=8)

1) ರಾಘವಾಂಕ

2) ಕೈಗುಣ ಬ್ಯಾಗುಣ

3) ಕೆ. ಎಸ್. ನಿಸಾರ್ ಅಹಮ್ಮದ್

4) ಬರಗೂರು ರಾಮಚಂದ್ರಪ್ಪ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : (1×8=8)

1) 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಹೆಸರು ಪಡೆದ ಕವಿ ಯಾರು ?

2) ''ಮುಗುಳು'' ಹಾಸ್ಯ ಪ್ರಬಂಧ ಸಂಕಲನದ ಲೇಖಕಿ ಯಾರು ?

3) ಹರಿಶ್ಚಂದ್ರನ ಪತ್ನಿಯ ಹೆಸರೇನು ?

4) ಜಿ. ಎನ್. ಮೋಹನ್‌ರವರು ಕನ್ನಡಕ್ಕೆ ಅನುವಾದಿಸಿದ ಲೇಖನ ಯಾವುದು ?

5) ಬೆಳಗೆರೆ ಜಾನಕಮ್ಮನವರ ಕಾವ್ಯನಾಮ ಏನು ?

6) ನಿತ್ಯೋತ್ಸವದ ಕವಿ ಯಾರು ?

7) ಐಸಾಸುರನನ್ನು ಕೊಲ್ಲುವಲ್ಲಿ ಚಾಮುಂಡಿಗೆ ನೆರವಾದವರು ಯಾರು ?

8) ಬಂಗಾರದ ಮನುಷ್ಯ ಎಂದು ಖ್ಯಾತಿ ಪಡೆದವರು ಯಾರು ?

---

Shri Dharmasthala Manjunatheshwara
College of Business Management Library
MANGALORE - 575 003